ಮೂಲ ದಾವಾ ಸಂಖ್ಯೆ. 25/2019 ಪಿ ಡಬ್ಲ್ಯೂ 1

(ದಿನಾಂಕ 23-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ನಂ 3 ರ ಪರ ಶ್ರೀ ಹೆಚ. ಎಮ್. ವಕೀಲರಿಂದಃ-

ನನ್ನ ತಂದೆಯ ಹೆಸರು ರುದ್ರಗೌಡ. ರುದ್ರಗೌಡ ತಂದೆ ಹೆಸರು ಮುದಕನ ಗೌಡ. ಮುದಕನ ಗೌಡನ ಹೆಂಡತಿ ಹೆಸರು ನಾಗಮ್ಮ. ನನ್ನ ತಂದೆ ರುದ್ರ ಗೌಡ ಇವರಿಗೆ ಗುಳೇನ ಗೌಡ ಈರನ ಗೌಡ, ಸಹೋದರರು. ವೀರನ ಗೌಡ ಇವರಿಗೆ 05 ಜನ ಮಕ್ಕಳು 1) ವೀರಭದ್ರಪ್ಪ 2) ಬಸಪ್ಪ 3) ಮುದಕಪ್ಪ 4) ನಾಗರಾಜ ಮತ್ತು ಪಂಪಣ್ಣ. ಗುಳೇಪ್ಪನ ಮಕ್ಕಳು 1) ವೀರೇಶ 2) ಸೋಮಣ್ಣ 3) ರತ್ನಮ್ಮ 4) ರುದ್ರಮ್ಮ 5) ಮಂಜಮ್ಮ 6) ಶಿವಮ್ಮ 7) ಕೊಟ್ರಮ್ಮ . ನನ್ನ ತಂದೆ ನಾನು ಮತ್ತು ಶಾಂತಮ್ಮ ಮಕ್ಕಳು. 1 ನೇ ಪ್ರತಿವಾದಿಯ ತಾಯಿ ತೋಟಮ್ಮ ನನಗೆ ದೊಡ್ಡಮ್ಮನಾಗಬೇಕು. ಈ ದಾವೆಯನ್ನು ನಾನು ಯಾವ ಯಾವ ಸರ್ವೆ ನಂಬರ ಕುರಿತು ದಾಖಲಿಸಿದ್ದೇನೆ ಅನ್ನುವ ಬಗ್ಗೆ ನನಗೆ ಸರ್ವೆ ನಂಬರ ಗಳು ಹೇಳಲು ಬರುವುದಿಲ್ಲ. ಅದೇ ರೀತಿ ನನಗೆ ವಿಸ್ತೀರ್ಣ ಹೇಳಲು ಬರುವುದಿಲ್ಲ. 3 ನೇ ಪ್ರತಿವಾದಿಯ ಮೇಲೆ ನಾನು ಯಾವ ಸರ್ವೆ ನಂಬರ ಮೇಲೆ ದಾವೆ ದಾಖಲಿಸಿದ್ದೇನೆ ಅಂತಾ ಹೇಳಲು ಬರುವುದಿಲ್ಲ. ಆದರೆ ನಾನು ದಾವೆಯನ್ನು ಕೊಡದಾರಿ ಹೊಲದ ಕುರಿತು ದಾಖಲಿಸಿದ್ದೇನೆ. ಆ ಜಮೀನು ಕೊಟಮ್ಮನಹಳ್ಳಿ ಗ್ರಾಮದಲ್ಲಿದೆ. ಅದರ ವಿಸ್ತರ್ಣ ನನಗೆ ಹೇಳಲು ಆಗುವುದಿಲ್ಲ. ಈ ದಾವೆಯನ್ನು ನಾನು 3 ನೇ ಪ್ರತಿವಾದಿ, 4 ನೇ ಪ್ರತಿವಾದಿ, 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ಮೇಲೆ ಹಾಗೂ ನನ್ನ ತಂಗಿಯ ಮೇಲೆ ದಾವೆಯನ್ನು ದಾಖಲಿಸಿದ್ದೇನೆ. 21.04.1982 ರಲ್ಲಿ ನನ್ನ ತಂದೆ ಮತ್ತು ಅವರ ಸಹೋದರರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂ 126/ಎ ಜಮೀನು ಒಟ್ಟು 7 ಎಕರೆ 10 ಸೆಂಟ್ಸ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 7 ಎಕರೆ 10 ಸೆಂಟ್ಸ ಜಮೀನಿನಲ್ಲಿ 3 ಭಾಗ ಎಂದರೆ ಆಗಿದೆ ಎಂದರೆ ಸರಿಯಲ್ಲ ಸಾಕ್ಷಿಯು 2 ಭಾಗ ಆಗಿದೆ ಅನ್ನುತ್ತಾರೆ. ಸದರಿ 2 ಭಾಗದಲ್ಲಿ ಒಂದು ಭಾಗ ನನ್ನ ತಂದೆಗೆ ಇನ್ನೊಂದು ಭಾಗ ನನ್ನ ದೊಡ್ಡಪ್ಪ ಈರನಗೌಡ ಇವರಿಗೆ ಆಗಿದೆ. ಆ ರೀತಿ 2 ಭಾಗ ಆಗಿಲ್ಲ 3 ಭಾಗ ಆಗಿದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನನ್ನ ದೊಡ್ಡಪ್ಪ ವೀರನಗೌಡ ಇವರಿಗೆ 2 ಎಕರೆ 65 ಸೆಂಟ್ಸ ಜಮೀನು ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಷ್ಟು ಕ್ಷೇತ್ರ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ ಆದರೆ ಜಮೀನು ಬಂದಿದೆ ಅನ್ನುತ್ತಾರೆ. 3 ನೇ ಪ್ರತಿವಾದಿ ತಂದೆಯಾದ ಗೂಳಪ್ಪ ಇವರಿಗೆ 2 ಎಕರೆ 37 ಸೆಂಟ್ಸ ಜಮೀನು ಬಂದಿದೆ ಎಂದರೆ ಸರಿಯಲ್ಲ. ನನ್ನ ತಂದೆಗೆ 2 ಎಕರೆ 13 ಸೆಂಟ್ಸ

ಜಮೀನು ಬಂದಿದೆ ಎಂದರೆ ಸುಳ್ಳು. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಐಟಂ ನಂ 10 ಯಾವ ಸರ್ವೆ ನಂಬರ್ ಎಷ್ಟು ಕ್ಷೇತ್ರ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂ 9, ಸರ್ವೆ ನಂ 126 ಎ /1, 2 ಎಕರೆ 37 ಸೆಂಟ್ಸ ಜಮೀನು 3 ನೇ ಪ್ರತಿ ವಾದಿ ತಾಯಿಯಿಂದ 3 ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿಯಲ್ಲ ಸಾಕ್ಷಿಯು ಆ ಜಮೀನು ನಮ್ಮದು ಎನ್ನುತ್ತಾಳೆ. ಆ ಜಮೀನು 3 ನೇ ಪ್ರತಿವಾದಿಗೆ ಎಂ ಆರ ನಂ 113-2009 ರಂತೆ ಬಂದಿದದ್ದು ಅದರಲ್ಲಿ 3 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾನೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ 3 ನೇ ಪ್ರತಿವಾದಿ ಸ್ವಾದೀನದಲ್ಲಿರುತ್ತಾರೆ, ನನಗೆ ಯಾವುದೇ ವಿಚಾರ ಗೊತ್ತಿಲ್ಲ, ಆದರೂ ಸಹ ನಾನು ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ 10 ನೇ ಆಸ್ತಿ ಸರ್ವೆ ನಂ 437 ಬಿ ನೇದ್ದರಲ್ಲಿ ನಮಗೆ 73 ಸೆಂಟ್ಸ ಜಮೀನು ಮಾತ್ರ ಬಂದಿದೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಆರೋಗ್ಯ ಸರಿಯಿಲ್ಲ ಸರಿಯಾದ ರೀತಿಯಲ್ಲಿ ಮಾತನಾಡಲು ಆಗುತ್ತಿಲ್ಲ ಅಂತಾ ಸಮಯಕೋರಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ